ಓ ಎಸ್ ನಂಃ76/2018
ಪಿ.ಡಬ್ಲ್ಯೂ -2
ದಿನಾಂಕಃ24.07.2023

<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್.ಎಲ್.ಎಂ. ವಕೀಲರಿಂದಃ</u>

ನನಗೆ ಆಲಂಪಲ್ಲಿ ವಂಶಸ್ಥರ ವಿಚಾರ ಗೊತ್ತು ಎಂದರೆ ಸರಿ. ವಾಸಮ್ಮ ಎಂಬುವವರು ನರಸಿಂಹಶೆಟ್ಟಿ ರವರ ಹೆಂಡತಿ ಎಂದರೆ ಸರಿ. ವಾಸಮ್ಮನವರಿಗೆ 6 ಜನ ಮಕ್ಕಳು ಎಂದರೆ ಸರಿ. ನಾಗವೇಣಿ, ನಾಗರಾಜ ಶೆಟ್ಟಿ, ಸೀತಾಲಕ್ಷ್ಮಿ, ನಿರ್ಮಲ, ಪುಷ್ಪವಲ್ಲಿ ಮತ್ತು ಸುರೇಶ್ ಬಾಬು ಎಂದರೆ ಸರಿ. ವಾಸಮ್ಮನವರಿಗೆ ದಾವಾ ಸ್ವತ್ತುಗಳು ಅವರ ತಂದೆ ಕೆಂಪ ಸಿದ್ದಪ್ಪ ಶೆಟ್ಟರ ಕಡೆಯಿಂದ ಬಂದಿರುತ್ತವೆ. ದಾವಾ ಸ್ವತ್ತುಗಳು ಯಾವ ಮೂಲಕ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು, ದಾನದ ಮುಖಾಂತರ ಬಂದಿರಬಹುದು ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ಅಸೆಸ್ ಮೆಂಟ್ ಸಂಖ್ಯೆ ಮತ್ತು ಚೆಕ್ಕಬಂದಿಗಳನ್ನು ನನಗೆ ಹೇಳಲು ಬರುವುದಿಲ್ಲ.

2. 1ನೇ ದಾವಾ ಸ್ವತ್ತಿನಲ್ಲಿ ವಾಸಮ್ಮನವರ ವಾರಸುದಾರರಿಗೂ ಭಾಗ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. 2ನೇ ದಾವಾ ಸ್ವತ್ತು ವಾಸಮ್ಮನವರಿಗೆ ದಾನದ ಮುಖಾಂತರ ಬಂದಿದ್ದು, ವಾಸಮ್ಮನವರು ಸಹ ತನ್ನ ಮಗ ಸುರೇಶ್ ರವರಿಗೆ ದಾನದ ಮುಖಾಂತರ ನೀಡಿರುತ್ತಾರೆ ಎಂದರೆ ಸಾಕ್ಷಿಯು ವಾಸಮ್ಮನ ದೊಡ್ಡ ಮಗನನ್ನು ಬಿಟ್ಟು ಸುರೇಶ್ ಬರೆಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ದೊಡ್ಡ ಮಗನನ್ನು ಬಿಟ್ಟು ಸುರೇಶ್ ದಾನ ಪತ್ರ ಬರೆಸಿಕೊಂಡಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ವಾಸಮ್ಮನವರ ಯೋಗಕ್ಷೇಮವನ್ನು ನೋಡಿಕೊಂಡ ಕಾರಣ ವಾಸಮ್ಮನವರಿಗೆ ದಾನದ ಮುಖಾಂತರ ಬಂದ 2 ನೇ ದಾವಾ ಸ್ವತ್ತು ಸ್ವಯಾರ್ಜಿತವಾಗಿರುವುದರಿಂದ ವಾಸಮ್ಮನವರು ತನ್ನಮಗ ಸುರೇಶ್ ರವರಿಗೆ ದಾನ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ನಾಗರತ್ನಮ್ಮ ನಾಗರಾಜ ಶೆಟ್ಟಿ ರವರನ್ನು ಹಾಲು ರಾಮೇಶ್ವರದಲ್ಲಿ ಸುಮಾರು 50 ವರ್ಷಗಳ ಹಿಂದೆ ವಿವಾಹವಾಗಿರುತ್ತಾರೆ, ಮದುವೆಯಾದ ದಿನಾಂಕ ಮತ್ತು ಇಸವಿ ಗೊತ್ತಿಲ್ಲ. ನಾಗರಾಜಶೆಟ್ಟಿರವರು ನಾಗರತ್ನಮ್ಮರವರನ್ನು ಮದುವೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾಗರಾಜಶೆಟ್ಟಿರವರು ಮದುವೆಯಾಗದೆ ತೀರಿಕೊಂಡರು ಎಂದರೆ ಸರಿಯಲ್ಲ. ನಾಗರತ್ನಮ್ಮನವರು ಹೊಸದುರ್ಗದವರು, ವಾಸಮ್ಮನವರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ನಾಗರತ್ನಮ್ಮನವರು ಹುಟ್ಟಿದ್ದು ಹೊಸದುರ್ಗದಲ್ಲಿ ಎಂದರೆ ಸರಿ. ನಾಗರತ್ನಮ್ಮರವರ ತಾಯಿ ಕಾಳಮ್ಮ ಮತ್ತು ತಂದೆ ಕಾಳಜ್ಜ. ನಾಗರತ್ನಮ್ಮರವರ ತಾಯಿ ಕಾಳಮ್ಮ ಮತ್ತು ತಂದೆ ಕಾಳಜ್ಜ ಎಂದರೆ ಸರಿಯಲ್ಲ, ಅವರ ತಾಯಿಯ ಹೆಸರು ಕರಿಯಮ್ಮ ತಂದೆಯ ಹೆಸರು ಕಾಡಪ್ಪ ಎಂದರೆ ಸರಿ.

4. ನಾಗರತ್ನಮ್ಮರವರದ್ದು ಮಾಡದ ಕೆರೆ ಬಳಿ ಚಿನ್ನ ಕಟ್ಟೆ ಎಂದರೆ ಸರಿಯಲ್ಲ. ನಾಗರತ್ನಮ್ಮನರವರನ್ನು ಅವರ ತಂದೆ ತಾಯಿ ಕ್ಯಾದಿಗೆರೆ ಗ್ರಾಮದ ತಿಮ್ಮಪ್ಪ ತಂದೆ ಮಾರಪ್ಪ ಎಂಬುವವರಿಗೆ ವಿವಾಹ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಾಗರತ್ನಮ್ಮರವರು ನಾಗರಾಜ ಶೆಟ್ಟಿರವರನ್ನು ಮದುವೆಯಾಗಿರವುದಿಲ್ಲ ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗರತ್ನಮ್ಮರವರು ನಾಗರಾಜಶೆಟ್ಟಿ ರವರ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.